**ನಗೆದಿನ ವಿಶೇಷ**

# ಮೂರೇ ಮೂರು!



## ಸದ್ಯ, ದೇವರು ದೊಡ್ಡವನು!

ಒಂದು ಊರಲ್ಲಿ ಒಬ್ಬ ಸೋಮಾರಿ ಇರ್ತಾನೆ. ನಿತ್ಯ ಆತ ತನ್ನ ಊರಿಂದ ಏಳೆಂಟು ಕಿಲೋಮೀಟರ್ ದೂರ ನಡೆದು ಹೋಗಿ ಕೆಲಸ ಮಾಡಿಕೊಂಡು ಬರ್ತಾನೆ. ಊರ ಜನರೆಲ್ಲ ಅವನಿಗೆ 'ಯಾಕೋ ಅಷ್ಟು ದೂರ ಹೋಗ್ತಿಯಾ? ಇಲ್ಲೇ ಎಲ್ಲಾದರೂ ಕೆಲಸ ಮಾಡಿದರೆ, ಅದೇ ಕೂಲಿ ತೆಗೆದುಕೊಳ್ಳಬಹುದಲ್ಲ' ಎಂದು ಬುದ್ಧಿ ಹೇಳ್ತಾರೆ. 'ನನಗೆ ಏನು ಇಷ್ಟವೋ ಅದನ್ನೇ ಮಾಡೋದು. ನಾನು ಯಾರ ಮಾತೂ ಕೇಳಲ್ಲ' ಅಂತಾನೆ.

ಎಲ್ಲರಿಗೂ ಅವನ ಕಷ್ಟ ನೋಡಿ ಅಯ್ಯೋ ಅನಿಸುತ್ತೆ. ಆದರೆ ಅವನಿಗೆ ಏನು ಹೇಳುವುದು. ಹೀಗೆ ಬೇಸಿಗೆಯಲ್ಲಿ ಒಂದು ದಿನ ನಡೆದುಕೊಂಡು ಹೋಗುತ್ತಿರುತ್ತಾನೆ. ಆಕಾಶ ಮಾರ್ಗದಲ್ಲಿ ಹೋಗುತ್ತಿದ್ದ ದೇವರಿಗೆ ಅವನು ಕಾಣಿಸುತ್ತಾನೆ. 'ಬಿಸಿಲಲ್ಲಿ ಯಾಕಪ್ಪ ಹೋಗ್ತಿದ್ದೀಯಾ? ಇಲ್ಲೇ ಎಲ್ಲಾದರೂ ಕೆಲಸ ಮಾಡಬಹುದಲ್ವಾ' ಎಂದು ಪ್ರತ್ಯಕ್ಷನಾಗಿ ದೇವರು ಕೇಳುತ್ತಾನೆ.

ಅದಕ್ಕೆ ಅವನು 'ನೀವ್ಯಾರ್ರೀ ಅದನ್ನೆಲ್ಲಾ ಕೇಳೋಕೆ' ಅಂತಾನೆ. 'ನಾನು ದೇವರು' ಅಂದರೆ, ಅದಕ್ಕೆ ಆ ಸೋಮಾರಿ, 'ಬುದ್ಧಿ ಹೇಳುವವರೆಲ್ಲ ದೇವರೇ' ಎಂದು ಕೊಂಕು ನುಡಿಯುತ್ತಾನೆ. 'ನನಗೆ ಇಷ್ಟ ಬಂದಿದ್ದು ಮಾಡ್ತೀನಿ. ನಿಮ್ಮ ಕೆಲಸ ಮಾಡ್ರೀ' ಎಂದು ದಬಾಯಿಸುತ್ತಾನೆ.

'ಆಯ್ತಪ್ಪ, ಒಂದು ಕೆಲಸ ಮಾಡ್ತೀನಿ. ನಿನಗೆ ಒಂದು ಕತ್ತೆ ಕೊಡ್ತೀನಿ. ಅದರ ಮೇಲೆ ಕುಳಿತುಕೊಂಡು ಎಲ್ಲಿಗೆ ಹೋಗಬೇಕು ಅನ್ನಿಸುತ್ತೋ ಆ ಕಡೆ ತಿರುಗಿಸಿ ದೇವರು ದೊಡ್ಡವನು ಅನ್ನು. ಅದು ಆ ದಿಕ್ಕಿನಲ್ಲಿ ಹೋಗ್ತಾ ಇರುತ್ತೆ. ನಿನಗೆ ಎಲ್ಲಿ ನಿಲ್ಲಬೇಕು ಅನ್ನಿಸುತ್ತೊ ಅಲ್ಲಿ ತಥಾಸ್ತು ಅನ್ನು, ಅಲ್ಲಿ ಕತ್ತೆ ನಿಲ್ಲುತ್ತದೆ. ಎಲ್ಲ ನಿನ್ನ ಇಷ್ಟದಂತೆಯೇ ಮಾಡು, ಆದರೆ ಈ ಕತ್ತೆ ಬಳಸಿಕೊ' ಎಂದು ದೇವರು ಹೇಳುತ್ತಾನೆ. ಅದಕ್ಕೆ ಸೋಮಾರಿ, 'ಅದೆಲ್ಲ ಬೇಡಾರಿ' ಎಂದ ತಕ್ಷಣ ದೇವರು ಮಾಯ ಆಗ್ತಾನೆ. ಇವನಿಗೆ ಭಯ ಆಗುತ್ತದೆ.

ದೆವ್ವಾನೇ ಇರಬೇಕು ಎಂದೆನಿಸಿ ನೋಡ್ತಾನೆ, ಅಲ್ಲೇ ಒಂದು ಕತ್ತೆ ಇರುತ್ತೆ. ಅಯ್ಯೋ ಇಲ್ಲಿ ಕತ್ತೆ ಇದೆಯಲ್ಲ ಎಂದು ಕುತೂಹಲದಿಂದ ಕತ್ತೆ ಮೇಲೆ ಕುಳಿತುಕೊಳ್ಳುತ್ತಾನೆ. ಇದನ್ನು ಮುಂದೆ ಓಡಿಸುವುದು ಹೇಗೆ ಎಂದು ಯೋಚಿಸುತ್ತಾನೆ. ಏನೋ ನೆನಪಾಗಿ 'ದೇವರು ದೊಡ್ಡವನು' ಎನ್ನುತ್ತಾನೆ. ರಪ್ ಎಂದು ಜಿಗಿದ ಕತ್ತೆ ಸಿಕ್ಕಾಪಟ್ಟೆ ವೇಗದಲ್ಲಿ ಓಡಲು ಶುರುಮಾಡುತ್ತದೆ. ಅದಕ್ಕೆ ಲಂಗಿಲ್ಲ, ಲಗಾಮಿಲ್ಲ... ನಿಲ್ಲಿಸುವುದು ಹೇಗೆಂದು ಸೋಮಾರಿಗೆ ಗೊತ್ತಾಗಲ್ಲ. 'ದೇವರೇ ನಿಲ್ಲಿಸು' ಅಂತಾನೆ. 'ನಿಧಾನಕ್ಕೆ ಹೋಗು' ಅಂತಾನೆ. ಅದು ಜೋರಾಗಿ ಓಡುತ್ತಾ ಓಡುತ್ತಾ ಅರ್ಧ ಕಾಮಗಾರಿಯಾದ ಬ್ರಿಜ್ ಮೇಲೆ ಹೋಗುತ್ತಿರುತ್ತದೆ. ಅವನಿಗೆ ಸತ್ತು ಹೋಗ್ತೀನಿ ಅಂತ ಅನ್ನಿಸುತ್ತೆ. 'ದೇವರೇ ನಿಲ್ಲಿಸು ನಿಲ್ಲಿಸು' ಅಂತ ಕೂಗಿದ್ರೂ ಕತ್ತೆ ನಿಲ್ಲಲ್ಲ. ಇನ್ನೇನು ಅರೆ ಬ್ರಿಜ್‌ನ ತುದಿ ದಾಟಬೇಕು ಅನ್ನುವಷ್ಟರಲ್ಲಿ ತಥಾಸ್ತು ಅಂತಾನೆ. ರಪ್ ಅಂತ ಕತ್ತೆ ನಿಲ್ಲುತ್ತೆ. ನೋಡ್ತಾನೆ, ಕೆಳಗಡೆ, ದೊಡ್ಡ ದೊಡ್ಡ ಬಂಡೆಗಲ್ಲುಗಳು, ಪಕ್ಕದಲ್ಲಿ ನದಿ ಚಿಕ್ಕದಾಗಿ ಹರಿಯುತ್ತಿರುತ್ತದೆ. ಭಯಾನಕ ಜಾಗ ನೋಡಿ ಅಧೀರನಾದ ಸೋಮಾರಿ, ಕೆಳಗೆ ಇಳಿಯಲು ಹಿಂಜರಿದು, 'ಸದ್ಯ ದೇವರು ದೊಡ್ಡವನು' ಅನ್ನುವುದೇ!

—ರಿಚರ್ಡ್ ಲೂಯಿಸ್, ಕಲಾವಿದ

## ಅಜ್ಜಿಗೆ ನೀರು ಕುಡಿಸಿದೆವು...

ಇಪ್ಪತ್ತೈದು ವರ್ಷದ ಹಿಂದೆ. ನಾನು ಹೈಸ್ಕೂಲ್‌ನಲ್ಲಿ ಇದ್ದೆ. ನಮ್ಮ ತಂದೆ ನೌಕರಿಯ ಕಾರಣದಿಂದ ನಾವು ಚಿತ್ರದುರ್ಗದಿಂದ ಹುಬ್ಬಳ್ಳಿಗೆ ಹೋಗಬೇಕಾಯಿತು. ಉತ್ತರ ಕರ್ನಾಟಕದ ಹೊಸ ಅನುಭವ. ಅಲ್ಲಿನ ಭಾಷೆ ಕೂಡ ಗೊತ್ತಿರಲಿಲ್ಲ. ಅದೇ ಸಮಯದಲ್ಲಿ ನಮ್ಮ ಅಜ್ಜಿಗೆ ಮೂಲವ್ಯಾಧಿ ಹೆಚ್ಚಾಗಿದ್ದರಿಂದ ಹುಬ್ಬಳ್ಳಿಯಲ್ಲೇ ಶಸ್ತ್ರಚಿಕಿತ್ಸೆ ಮಾಡಿಸಿದ್ದರು. ರೋಗಿಯ ಜೊತೆ ಆಸ್ಪತ್ರೆಯಲ್ಲಿ ಮಹಿಳೆಯರೊಬ್ಬರು ಇರಬೇಕಿತ್ತು. ನನ್ನ ತಂಗಿ–ತಮ್ಮ ಚಿಕ್ಕವರಿದ್ದರು. ಹಾಗಾಗಿ ನನ್ನ ಅಮ್ಮ ಮನೆಯಲ್ಲಿದ್ದರು. ನಾನೇ ಸ್ವಲ್ಪ ದೊಡ್ಡವಳಿದ್ದಿದ್ದರಿಂದ ಆಸ್ಪತ್ರೆಯಲ್ಲಿ ಉಳಿದಿದ್ದೆ. ಅವತ್ತು ರಾತ್ರಿ ಊಟ ತರಲು ಮನೆಗೆ ಅಪ್ಪ ಹೋದರು. ಅಷ್ಟು ಹೊತ್ತಿಗೆ ನರ್ಸ್ ಅಗಲವಾದ ಒಂದು ಟಬ್ ತುಂಬ ನೀರು ತಂದ್ರು. ಅದರಲ್ಲಿ ಸ್ವಲ್ಪ ಡೆಟಾಲ್ ಹಾಕಿದ್ದರು. ನನಗೆ ಕೊಟ್ಟು, 'ನೋಡವ್ವ, ಇದರಾಗ ಅಜ್ಜಿ ಕೂಡಿಸಬೇಕು. ಚೆನ್ನಾಗಿ ಕೂಡ್ಸಿದ್ರೆ, ಭೇದಿನೂ ಚೆನ್ನಾಗಿ ಆಗ್ತೈತಿ' ಎಂದು ಹೇಳಿದರು. ಅದನ್ನು ಕುಡಿಸುವುದು ಹೇಗೆ ಎಂದು ಹೆದರಿಕೆ ಆಗಿ ಸುಮ್ಮನಾಗಿ ಬಿಟ್ಟೆ.

ಅಪ್ಪ ಬಂದ್ರು, ಅವರಿಗೆ 'ಅಪ್ಪ, ನರ್ಸ್ ಬಂದು ಇದನ್ನು ಕೊಟ್ಟಿದ್ದಾರೆ' ಎಂದು ಹೇಳಿದೆ. ಬೇಸಿನ್ ನೀರು ಕುಡಿಯಲು ಹೇಗೆ ಸಾಧ್ಯ ಅನ್ನುವ ಅನುಮಾನ ಅಪ್ಪನಿಗೆ ಬಂದು, 'ಡಾಕ್ಟರ್ ಕೇಳಿ ಬರ್ತೀನಿ' ಅಂತ ಹೋದರು. ಅಷ್ಟರಲ್ಲಿ ನರ್ಸ್ ಎದುರು ಸಿಕ್ಕರು. ಆಕೆ 'ಆಗಲೇನೆ ಹೇಳಿದಿನಲ್ರಿ ಕೂಡ್ಸಾಕೆ' ಅಂದ್ರು.

ಹಿಂದಿರುಗಿ ಬಂದ ಅಪ್ಪ 'ಹೌದಮ್ಮ, ಬಾತ್ ರೂಮಿನಲ್ಲಿ ಕುಡಿಸಬೇಕಂತೆ, ಭೇದಿ ಚೆನ್ನಾಗಿ ಆಗುತ್ತಂತೆ' ಅಂದ್ರು. ನಮ್ಮ ಅಜ್ಜಿ ಆಸ್ಪತ್ರೆಯ ಒಂದು ಹನಿ ನೀರೂ ಕುಡಿಯುವವರಲ್ಲ. ಅಂತಹವರನ್ನು ಬಚ್ಚಲಿಗೆ ಕರೆದುಕೊಂಡು ಹೋಗಿ ಡೆಟಾಲ್ ನೀರು ಕುಡಿಸಿದೆವು. ಮೂರು ಲೋಟ ಕುಡಿಯುವಷ್ಟರಲ್ಲಿ ಅಜ್ಜಿ 'ಇಷ್ಟೇ ಕಣೇ, ಇದಕ್ಕಿಂತ ಹೆಚ್ಚಿಗೆ ಕುಡಿಯಲು ನನ್ನ ಕೈಯಲ್ಲಿ ಆಗಲ್ಲ' ಅಂದು ನರಳುತ್ತಲೇ ಹೋಗಿ ಮಲಗಿದರು. ರಾತ್ರಿ ಡಾಕ್ಟರ್ ರೌಂಡ್ಸ್ ಬಂದರು. 'ನೀರಲ್ಲಿ ಕೂಡ್ಸಿದ್ರಿ' ಅಂದ್ರು. ನಮ್ಮ ಅಪ್ಪ 'ಹೂಂ ರೀ ಕುಡ್ಸಿದೀವಿ. ಮೂರು ಲೋಟ ಅಷ್ಟೇ ಕುಡಿದಿದ್ದು' ಅಂದ್ರು. ಡಾಕ್ಟರ್ ತಕ್ಷಣ 'ಅಲ್ಲ ರೀ, ನಿಮ್ಮ ಮಗಳಿಗೆ ಗೊತ್ತಾಗಲ್ಲ ಅಂದ್ರೆ, ಎಂಜಿನಿಯರ್ ಆದ ನಿಮಗೂ ಬುದ್ಧಿ ಇಲ್ಲ ಏನ್ರೀ' ಎಂದು ಚೆನ್ನಾಗಿ ಬೈದರು. ಅಷ್ಟರಲ್ಲಿ ಅಜ್ಜಿಗೆ ವಾಂತಿ ಆಗುವ ಲಕ್ಷಣ ಕಾಣಿಸಿತು. ಪೇಚಿಗೆ ಹಚ್ಚಿದ ಆ ಪ್ರಕರಣ ನೆನಪಾದರೆ ಈಗ ನಗು ಬರುತ್ತೆ.

—ನಳಿನಿ ಭೀಮಪ್ಪ, ಲೇಖಕಿ

## ನಾನ್ ಕರೆಕ್ಟ್

ನನ್ನ ಹೆಂಡತಿಗೆ ತುಂಬ ಇಷ್ಟಪಟ್ಟು ಒಂದು ಸೀರೆ ತೆಗೆದುಕೊಂಡು ಬಂದೆ. ಖುಷಿಪಡ್ತಾಳೆ ಅಂತ ಅವಳಿಗೆ ಕೊಟ್ಟರೆ, ಆಕೆಗೆ ಖುಷಿ ಆಗಲಿಲ್ಲ. ಆಗ ನಮ್ಮಿಬ್ಬರ ನಡುವೆ ನಡೆದ ಸಂಭಾಷಣೆ ಕೇಳಿ:

ನಾನು: ಸೀರೆ ನಿನಗೆ ಯಾಕೆ ಇಷ್ಟವಾಗಲಿಲ್ಲ?

ಅವಳು: ಯಾವುದೇ ಆದರೂ ನಿಮಗ ಸರಿಯಾಗಿ ಸೆಲೆಕ್ಟ್ ಮಾಡಾಕ ಬರೋದಿಲ್ರಿ.

ನಾನು: ಇದನ್ನು ಒಂದು ಸಾರಿ ಹೇಳಬೇಡ. ಸಾವಿರ ಸಾರಿ ಹೇಳು.

ಅವಳು: ಯಾಕ್ರಿ?

ನಾನು: ಅಷ್ಟು ಕರೆಕ್ಟ್ ಆಗಿ ಸೆಲೆಕ್ಟ್ ಮಾಡೋದಾಗಿದ್ರೆ ನಿನ್ನನ್ನೇ ಯಾಕೆ ಮಾಡ್ತಾ ಇದ್ದೆ...

—ರವಿ ಭಜಂತ್ರಿ, ಅಧ್ಯಾಪಕ, ಸವದತ್ತಿ